## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಬಿ. ಸಿದ್ದಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ಹಾಗೂ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶಿವಮೊಗ್ಗ ಇವರ ವಿರುದ್ಧದ ಶಿಸ್ತು ಕ್ರಮದ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ನೋಟೀಸ್ ಸಂಖ್ಯೆ:ಗ್ರಾಅಪ/40/ಪಬವ/2012 ದಿ:13-8-2013.
2. ಶ್ರೀ ಬಿ. ಸಿದ್ದಪ್ಪ, ಇವರ ಲಿಖಿತ ಹೇಳಿಕೆ ದಿನಾಂಕ:27-8-2013.

-------

**ಪ್ರಸ್ತಾವನೆ:**

ಶ್ರೀ ಬಿ. ಸಿದ್ದಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ನಿಯೋಜನೆ ಮೇಲೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶಿವಮೊಗ್ಗ ಈ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ. 2010-11ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಎಸಗಿದ್ದಾರೆನ್ನಲಾದ ಈ ಕೆಳಕಂಡ ಕರ್ತವ್ಯಲೋಪದ ಆರೋಪಗಳಿಗೆ ಸಂಬಂಧಿಸಿದಂತೆ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ನೋಟೀಸ್ ನಲ್ಲಿ ಕನಾಸೇ(ವನಿಮ) 1957ರ ನಿಯಮ 12 ರಡಿ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿತ್ತು.

1. ಅನುಮೋದಿಸಲಾದ ಎನ್‌ಎಂಆರ್ ಮತ್ತು ಸಾಮಗ್ರಿ ಬಿಲ್ಲುಗಳನ್ನು ಗ್ರಾಮ ಪಂಚಾಯತಿ ವಾರು ಕ್ರಮಬದ್ಧವಾಗಿ ತಾಲ್ಲೂಕು ಪಂಚಾಯತ್ ಕಾರ್ಯಾಲಯದಲ್ಲಿ ನಿರ್ವಹಿಸಿರುವುದಿಲ್ಲ.
2. ಎಂಐಎಸ್ ನಲ್ಲಿ ದಾಖಲಿಸಲಾಗಿರುವ ಸಾಕಷ್ಟು ಕಾಮಗಾರಿಗಳ ಎನ್‌ಎಂಆರ್ ಮತ್ತು ಕಾಮಗಾರಿ ಬಿಲ್ಲುಗಳು ಶಿವಮೊಗ್ಗ ತಾಲ್ಲೂಕು ಪಂಚಾಯತ್‌ನಲ್ಲಿ ನಿರ್ವಹಿಸಲಾದ ರಿಜಿಸ್ಟರುಗಳಲ್ಲಿ ದಾಖಲಾಗಿರುವುದಿಲ್ಲ.
3. ತಾಲ್ಲೂಕು ಪಂಚಾಯತ್ ರಿಜಿಸ್ಟರುಗಳಲ್ಲಿ ದಾಖಲಾದ ಕಾಮಗಾರಿಗಳ ಬಿಲ್ಲುಗಳಿಗೆ ಕಾಮಗಾರಿಯ ಎನ್‌ಎಂಆರ್ ಸಂಖ್ಯೆಯನ್ನು ದಾಖಲಿಸಿರುವುದಿಲ್ಲ.
4. ಎಂಜಿಎನ್‌ಆರ್‌ಇಜಿಎ ಆಕ್ಟ್ 2005ರ ಪ್ರಕರಣ 15ರ ಪ್ರಕಾರ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ " ಕಾರ್ಯಕ್ರಮ ಅಧಿಕಾರಿ ಸಹ ಅಗಿದ್ದು" ಪ್ರಕರಣ 15, ಷೆಡ್ಯೂಲ್ 1 ರ ಪ್ಯಾರಾ 3, ಪ್ಯಾರಾ 13ರ ಕಂಡಿಕೆ (VII) ಪ್ಯಾರಾ 14 ಹಾಗೂ ಷೆಡ್ಯೂಲ್ 11ರ ಪ್ಯಾರಾ 6ರ ಪ್ರಕಾರ ಜವಾಬ್ದಾರಿಗಳನ್ನು ಕ್ರಮಬದ್ಧವಾಗಿ ನಿರ್ವಹಿಸದೇ ಕರ್ತವ್ಯ ಲೋಪ ಮಾಡಿರುವುದು , ಅಲ್ಲದೆ, ದಿನಾಂಕ:22-09-2010ರ ಸಂಖ್ಯೆ:ಗ್ರಾಅಪ 110 ಉಖಾಯೋ 2009ರ ಪತ್ರದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾ.ಇಲಾಖೆ, ಬೆಂಗಳೂರು ಇವರು ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸೂಚಿಸಿರುವ ಪ್ರಕಾರ ಭಾರತ ಸರ್ಕಾರದ ಕಾರ್ಯಾಚರಣೆ ಕೈಪಿಡಿ (Operation Manual) ಕಂಡಿಕೆ 10.3-1 ರಲ್ಲಿ ತಿಳಿಸಿರುವಂತೆ ಮೇಲ್ವಿಚಾರಣೆ ಮಾಡದೇ ಕರ್ತವ್ಯ ಲೋಪವೆಸಗಿರುವುದು ಮತ್ತು ಕಛೇರಿ ಕಾರ್ಯ ವಿಧಾನ ಕೈಪಿಡಿ ಪ್ಯಾರಾ 3ರ ಪ್ರಕಾರ ಕಛೇರಿ ಮುಖ್ಯಾಧಿಕಾರಿಯ ಕರ್ತವ್ಯಗಳನ್ನು ನಿರ್ವಹಿಸದೆ ಇರುವುದು

ಸದರಿ ನೋಟೀಸಿಗೆ ಅಪಾದಿತ ಅಧಿಕಾರಿಯು ಮೇಲೆ ಕ್ರಮ ಸಂಖ್ಯೆ: (2) ರಲ್ಲಿ ಓದಲಾದ ದಿನಾಂಕ 27-08-2013ರಂದು ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಕಛೇರಿ ಕೆಲಸಗಳನ್ನು ನಿರ್ವಹಿಸಲು ಸಿಬ್ಬಂದಿಗಳಿಗೆ ಕೆಲಸ ಹಂಚಿಕೆಯನ್ನು ಮಾಡುವುದು ಕಛೇರಿ ಮುಖ್ಯಸ್ಥರ ಕರ್ತವ್ಯ ವಾಗಿದ್ದು, ಆ ಪ್ರಕಾರ ಶ್ರೀ ವೆಂಕಟೇಶ ಬಿ. ದ್ವಿ.ದ.ಸ. ಇವರಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ವಿಷಯದ ಹಂಚಿಕೆಯನ್ನು ಮಾಡಲಾಗಿದೆ. ಅವರು ಆ ಉಪ ವಿಭಾಗದ ಕೆಲಸಗಳನ್ನು ಕಛೇರಿ ಕಾರ್ಯವಿಧಾನ ಕೈಪಿಡಿ ಪ್ಯಾರಾ 8 ಮತ್ತು 31 ರ ಪ್ರಕಾರ

ನಿರ್ವಹಿಸಬೇಕಾಗಿತ್ತು ಹಾಗೂ ಅವರ ಕಾರ್ಯನಿರ್ವಹಣೆಯನ್ನು ಸಮರ್ಪಕವಾಗಿ ನಡೆಸುತ್ತಿದ್ದಾರೆಯೋ ಅಥವಾ ಇಲ್ಲವೇ ಎಂಬುದನ್ನು ಕಛೇರಿಯ ವ್ಯವಸ್ಥಾಪಕರಾಗಿದ್ದ ಶ್ರೀ ಹನುಮಂತಪ್ಪನವರು ಕಛೇರಿ ಕಾರ್ಯವಿಧಾನ ಕೈಪಿಡಿ ಪ್ಯಾರಾ 7ರ ಪ್ರಕಾರ ನಿರ್ವಹಿಸಬೇಕಾಗಿತ್ತು ಹಾಗೂ ಅವರ ಕಾರ್ಯನಿರ್ವಹಣೆಯನ್ನು ಸಮರ್ಪಕವಾಗಿ ನಡೆಸುತ್ತಿದ್ದಾರೆಯೋ ಅಥವಾ ಇಲ್ಲವೇ ಎಂಬುದನ್ನು ಕಛೇರಿಯ ವ್ಯವಸ್ಥಾಪಕರಾಗಿದ್ದ ಶ್ರೀ ಹನುಮಂತಪ್ಪನವರು ಕಛೇರಿ ಕಾರ್ಯವಿಧಾನ ಕೈಪಿಡಿ ಪ್ಯಾರಾ 7ರ ಪ್ರಕಾರ ಮೇಲುಸ್ತುವಾರಿ ಮಾಡಬೇಕಾಗಿತ್ತು. ಅವರೀರ್ವರೂ ಸಹ ಕಡತಗಳ ನಿರ್ವಹಣೆ ಬಗ್ಗೆ ಗಮನ ಹರಿಸದ ಕಾರಣ ಆರೋಪ ಬರಲು ಕಾರಣವಾಯಿತು. ಕಾರ್ಯನಿರ್ವಾಹಕ ಅಧಿಕಾರಿಯು ಇಡೀ ತಾಲ್ಲೂಕಿನಲ್ಲಿ ಅನುಷ್ಠಾನವಾಗುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಭೌತಿಕ ಪರಿಶೀಲನೆ ಮಾಡುವುದಲ್ಲದೆ ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಗಮನಹರಿಸಬೇಕಾಗುತ್ತದೆ, ಹಾಗೆಯೇ ತಾಲ್ಲೂಕು ಪಂಚಾಯತ್‌ನ ಸಾಮಾನ್ಯ ಸಭೆ ಮತ್ತು ಸ್ಥಾಯಿ ಸಮಿತಿ ಸಭೆಗಳು, ಜಿಲ್ಲಾ ಪಂಚಾಯತ್ ನಲ್ಲಿ ನಡೆಯುವ ಸಾಮಾನ್ಯ ಸಭೆ, ಸ್ಥಾಯಿ ಸಮಿತಿ ಸಭೆಗಳು, ಕೆಡಿಪಿ ಸಭೆಗಳು ಹಾಗೂ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸರ್ಕಾರದ ಕಾರ್ಯದರ್ಶಿಗಳು ನಡೆಸುವ ಸಭೆಗಳಿಗೆ ಹಾಜರಾಗಬೇಕಾಗುತ್ತಿತ್ತು, ಮತ್ತು ಅನುಪಾಲನಾ ಕ್ರಮವನ್ನು ಸಹ ಕಾಲಕಾಲಕ್ಕೆ ತೆಗೆದುಕೊಳ್ಳಬೇಕಾಗಿತ್ತು, ಅಷ್ಟೇ ಅಲ್ಲದೇ ಜನಪ್ರತಿನಿಧಿಗಳು ಪ್ರಸ್ತಾಪಿಸುವ ಹಲವಾರು ಸಮಸ್ಯೆಗಳಿಗೆ ಸ್ಪಂದಿಸಬೇಕಾಗುತ್ತಿತ್ತು, ಅದೇ ರೀತಿ ಸಾರ್ವಜನಿಕರ ಅಹವಾಲುಗಳಿಗೂ ಸಹ ಗಮನ ಕೊಡಬೇಕಾಗುತ್ತಿತ್ತು, ಇಂತಹ ಕೆಲಸಗಳ ಒತ್ತಡದಲ್ಲಿ ಕಛೇರಿಯ ವಿಷಯ ನಿರ್ವಾಹಕರು ದಿನವಹಿ ನಿರ್ವಹಿಸಬೇಕಾದ ಕಡತಗಳ ಕಡೆ ಗಮನ ಹರಿಸಲು ಸಮಯದ ಕೊರತೆ ಉಂಟಾಗುತ್ತಿತ್ತು, ಕಛೇರಿಯ ಸಿಬ್ಬಂದಿಯವರು ಅವರ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಾರೆಂಬ ನಂಬಿಕೆಯಿಂದ ಹಾಗೂ ವಿಶ್ವಾಸದಿಂದ ಅಭಿವೃದ್ಧಿ ಕೆಲಸಗಳತ್ತ ಹೆಚ್ಚಿಗೆ ಒತ್ತು ಕೊಟ್ಟಿರುವುದಾಗಿ, ಆರೋಪದಲ್ಲಿ ಪ್ರಸ್ತಾಪಿಸಿರುವ ವಿಷಯಗಳು ನೇರವಾಗಿ ವಿಷಯ ನಿರ್ವಾಹಕರಿಗೆ ಹಾಗೂ ಕಛೇರಿ ವ್ಯವಸ್ಥಾಪಕರಿಗೆ ಸಂಬಂಧಿಸಿದ್ದರೂ ಸಹ ಕಛೇರಿ ಮುಖ್ಯಸ್ಥನಾಗಿ ಅವರ ಜವಾಬ್ದಾರಿಯೂ ಸಹ ಇತ್ತು, ಆದರೆ ಪುರುಸೊತ್ತಿಲ್ಲದ ಕೆಲಸಗಳ ಒತ್ತಡದಿಂದ ಮೇಲ್ವಿಚಾರಣೆ ಮಾಡಲು ಸಾಧ್ಯವಾಗಲಿಲ್ಲವೇ ವಿನ: ನಿರ್ಲಕ್ಷತನದಿಂದ ಅಥವಾ ಬೇಜವಾಬ್ದಾರಿತನದಿಂದ ಆಗಿರುವುದಿಲ್ಲವೆಂದು ತಿಳಿಸುತ್ತಾ, ಅವರ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ಆಪಾದಿತ ಅಧಿಕಾರಿ ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಅವರು ಕರ್ತವ್ಯಲೋಪವೆಸಗಿರುವುದನ್ನು ಒಪ್ಪಿಕೊಂಡಿರುವುದರಿಂದ ಹಾಗೂ ಅವರು ಕರ್ತವ್ಯಲೋಪವೆಸಗಿರುವುದು ದೃಢಪಟ್ಟಿರುವುದರಿಂದ ಅವರ ಕರ್ತವ್ಯಲೋಪಕ್ಕೆ ಸಂವಾದಿಯಾಗಿ ಕಾಲವೇತನ ಶ್ರೇಣಿಯಲ್ಲಿ ಒಂದು ಹಂತವನ್ನು 3 ವರ್ಷಗಳ ಅವಧಿಗೆ ಇಳಿಸಲು ಮತ್ತು ಸದರಿ ಅವಧಿಯಲ್ಲಿ ಅವರ ವಾರ್ಷಿಕ ಬಡ್ತಿಗಳನ್ನು ಸಂಚಿತ ಪರಿಣಾಮವಿಲ್ಲದೆ (Without cumulative effect) ತಡೆಹಿಡಿಯುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಆದೇಶ .

—

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 40 ಪಬವ 2012 ಬೆಂಗಳೂರು ದಿನಾಂಕ:25-11-2013</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಶ್ರೀ ಬಿ. ಸಿದ್ದಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶಿವಮೊಗ್ಗ ಪ್ರಸ್ತುತ ಕ್ಷೇತ್ರ ಶಿಕ್ಷಣಾಧಿಕಾರಿ, ಜಗಳೂರು, ದಾವಣಗೆರೆ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿ 1957ರ ನಿಯಮ 8(iv-ಎ) ರನ್ವಯ ಅವರ ಕಾಲವೇತನ ಶ್ರೇಣಿಯಲ್ಲಿ ಒಂದು ಹಂತವನ್ನು 3 ವರ್ಷಗಳ ಅವಧಿಗೆ ಇಳಿಸಲು ಮತ್ತು ಸದರಿ ಅವಧಿಯಲ್ಲಿ ಅವರ ಮುಂದಿನ ವಾರ್ಷಿಕ ವೇತನ

ಬಡ್ತಿಗಳನ್ನು ಸಂಚಿತ ಪರಿಣಾಮವಿಲ್ಲದೆ (Without cumulative effect) ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಚಂದ್ರಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಶಿವಮೊಗ್ಗ.
5. ಸರ್ಕಾರದ ಅಧೀನ ಕಾರ್ಯದರ್ಶಿ, (ಸಮಿತಿಗಳು) ಶಿಕ್ಷಣ ಇಲಾಖೆ, ಬೆಂಗಳೂರು.
6. ಶ್ರೀ ಬಿ. ಸಿದ್ದಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ಜಗಳೂರು, ದಾವಣಗೆರೆ ಜಿಲ್ಲೆ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್)/ಅಪರ ಕಾರ್ಯದರ್ಶಿ (ಆಡಳಿತ), ಗ್ರಾ .ಅ. & ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
8. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.